ಶ್ರೀ ಕೆ.ಎಸ್. ಈಶ್ವರಪ್ಪ : ಇದು ಪಾಲಿಸಿ ವಿಚಾರ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಂದ ವಂತಿಕೆ ತೆಗೆದುಕೊಳ್ಳುವುದಿಲ್ಲವೆಂಬುದು ಸ್ಪಷ್ಟವಾಗಿ ಹೇಳಲಿ. ಸುಪ್ರೀಂಕೋರ್ಟಿನಲ್ಲಿ ಒಂದು ಹೇಳಿಕೆ ಕೊಟ್ಟಿದ್ದರು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಅನಧಿಕೃತವಾದ ಹೇಳಿಕೆ ಕೊಡುವ ಅಭ್ಯಾಸ ನನಗೂ ಇಲ್ಲ, ನಮ್ಮ ಸರ್ಕಾರಕ್ಕೂ ಇಲ್ಲ. ಇದನ್ನು ಪೋಸ್ಟ್‌ಪೋನ್ ಮಾಡಿದ್ದು ಏಕೆ ಎಂದರೆ, ಡೀಟೈಲ್ಸ್ ತರಿಸಿಕೊಂಡು, 8 ದಿವಸದೊಳಗಾಗಿ ತಮಗೆ ಕೊಡುತ್ತೇನೆ.

SRI S. RAJENDRAN : Till that time, let them appoint an Administrator to that college.

ಅಧ್ಯಕ್ಷರು : ಆ ತರಹ ಅರ್ಬಿಟ್ರರಿ ಆರ್ಡರ್ ಮಾಡುವುದು ಸರಿಯಾಗುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಅವರು ಬೇಕಾದಷ್ಟು ಅನ್ಯಾಯ ಮಾಡಿಕೊಂಡು ಹೋಗುತ್ತಿದ್ದಾರೆ. ಅವರನ್ನು ಸೇಫಗಾರ್ಡ್ ಮಾಡಿಕೊಂಡು ಹೋದರೆ, we cannot do any work in the Constituency.

ಅಧ್ಯಕ್ಷರು : ನೀವು ಪರ್ಟಿಕ್ಯುಲರ್ ಆಗಿ, ಆ ಕಾಲೇಜಿಗೆ ರೆಫರ್‌ಮಾಡಿ ಪ್ರಶ್ನೆ ಕೇಳಿದ್ದರೆ ಚೆನ್ನಾಗಿತ್ತು. ಇದು ಜನರಲ್ ಪ್ರಶ್ನೆ ಮತ್ತು ಸ್ಟೇಟ್‌ವೈಸ್ ಕೇಳಿದ್ದೀರಿ.

SRI S. RAJENDRA : Sorry. My question is relating to a particular college i.e. KGF Firsst Grade College.

ಅಧ್ಯಕ್ಷರು : ನಾವು ಈಗ ಒಂದು ಕೆಲಸ ಮಾಡೋಣ. ನಮ್ಮ ಅಸೆಂಬ್ಲಿ ಆಗುವುದರ ಮೊದಲೇ ನಾನು ಈ ವಿಷಯವನ್ನು ನೋಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಆಗಬಹುದು.

ಗ್ರಾಮ ಪಂಚಾಯತ್ ಗ್ರಂಥಾಲಯಗಳ ಉದ್ಯೋಗಿಗಳನ್ನು ಖಾಯಂಗೊಳಿಸುವುದು.

351 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ನೇಮಕಗೊಂಡ ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರಿಗೆ ಈಗ ಕೊಡುತ್ತಿರುವ ಸಂಭಾವನೆ ಎಷ್ಟು?

ಆ) ಸುಮಾರು 10 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾಗ್ಯೂ ಇವರ ಸಂಬಳವನ್ನು ಹೆಚ್ಚಿಸದೆ, ಇವರನ್ನು ಖಾಯಂ ಮಾಡದೇ ಕನಿಷ್ಠ ವೇತನ ಕೊಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ?

ಇ) ಇವರನ್ನು ಖಾಯಂ ಮಾಡುವ ಕುರಿತಂತೆ 1996ನೇ ಇಸವಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನೇಮಕವಾದ ಸಮಿತಿಯ ವರದಿ ಬಂದಿದೆಯೇ; ಇದರ ಶಿಫಾರಸ್ಸುಗಳೇನು?

ಈ) ಗ್ರಂಥಾಲಯ ಮೇಲ್ವಿಚಾರಕರಿಗೆ ಗ್ರಂಥಾಲಯ ವಿಜ್ಞಾನ ತರಬೇತಿ ಕೊಡಿಸುವ ಬಗ್ಗೆ ಸರ್ಕಾರ ಯೋಜಿಸಿದೆಯೇ ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) ಗೌರವ ಸಂಭಾವನೆ ರೂ. 500-00

ಆ) ಇಲ್ಲ.

ಇ) ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ದಿ: 1-7-1984ರ ನಂತರ ದಿನಗೂಲಿ ಆಧಾರದ ಮೇಲೆ ನೇಮಕ ಹೊಂದಿದವರ ಸೇವೆಯನ್ನು ಸಕ್ರಮಗೊಳಿಸುವ ಬಗ್ಗೆ ಒಂದು ಸಮಿತಿಯನ್ನು ರಚಿಸಿದ್ದು, ಈ ವಿಷಯವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿದೆ.

ಈ) ಹಾಲಿ ತರಬೇತಿ ನೀಡಲಾಗುತ್ತಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ನೇಮಕಗೊಂಡಂತಹ ಗ್ರಾಮ ಪಂಚಾಯತಿಯ ಗ್ರಂಥಾಲಯ ಮೇಲ್ವಿಚಾರಕರ ಬಗ್ಗೆ ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇವರು ಕಳೆದ 10 ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಿದ್ದರೂ ಸಹ ಅವರ ಸಂಬಳವನ್ನು ಹೆಚ್ಚು ಮಾಡದೇ ಹಾಗೆಯೇ ದುಡಿಸಿಕೊಳ್ಳುತ್ತಿದ್ದಾರೆ. ಇವರನ್ನು ಖಾಯಂ ಮಾಡುವ ಕುರಿತು ಒಂದು ಸಮಿತಿಯನ್ನು ನೇಮಕ ಮಾಡಿದರು. ಅದರ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಕಳೆದ ಭಾರಿ ನಾನು ಈ ಸಂಬಂಧವಾಗಿ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದರು. ಈಗ ಒಂದು ವರ್ಷ ಆಯಿತು, ಆದರೆ ಇದರಲ್ಲಿ ಇದುವರೆಗೂ ಏನೂ ಕೂಡ ಆಗಿಲ್ಲ. ನನಗೆ ಈಗ ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದಾರೆ. ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ದಿನಾಂಕ 1-7-84ರ ನಂತರ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿದ್ದು ವಿಷಯವನ್ನು ಆಡಳಿತ ಮತ್ತು ಸಿಬ್ಬಂದಿ ಇಲಾಖೆಯವರು ನಿರ್ವಹಿಸುತ್ತಿದ್ದಾರೆಂದು ಈ ರೀತಿಯ ಉತ್ತರವನ್ನು ಸರ್ಕಾರ ಕೊಟ್ಟರೆ ನಾನು ಹೇಗೆ ಪ್ರಶ್ನೆಯನ್ನು ಕೇಳಬೇಕು; ಹೇಗೆ ನಾವು ಅವರಿಂದ ಉತ್ತರ ಪಡೆಯಬೇಕೋ ಎನ್ನುವುದು ಅರ್ಥವಾಗುತ್ತಿಲ್ಲ. ನಾನು ಸ್ಪಷ್ಟವಾಗಿ ಪ್ರಶ್ನೆಯನ್ನು ಕೇಳಿದ್ದೇನೆ. ಗ್ರಂಥಾಲಯ ಮೇಲ್ವಿಚಾರಕರ ಸೇವೆಯನ್ನು ಖಾಯಂ ಮಾಡುವ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ. ಆ ಸಮಿತಿಯ ವರದಿ ನಿಮ್ಮ ಕೈ ಸೇರಿದೆ. ಆ ವರದಿಯ ಪ್ರಕಾರ ತಾವು ಏನು ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಿ ?

ಶ್ರೀ ಆರ್ ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ಇಲಾಖಾ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಆ ವರದಿ ಈಗ ಡಿ ಪಿ ಎ ಆರ್.ನಲ್ಲಿ ಇದೆ. ಅವರು ತೀರ್ಮಾನ ತೆಗೆದುಕೊಂಡ ಮೇಲೆ ಸರ್ಕಾರ ಪರಿಗಣಿಸುತ್ತದೆ. ಅವರಿಗೆ ಕೊಡುವ ಗೌರವಧನವನ್ನು 300 ರೂಪಾಯಿಗಳಿಂದ 500 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ.